<u>ಹಿರಿಯ ದಿವಾಣಿ ಮತ್ತು ಜೆ ಎಮ್ ಎಫ್ ಸಿ, ನ್ಯಾಯಾಲಯ, ಕುಂದಗೋಳ</u>

<u>ಸಿ.ಸಿ. ನಂ. **777/2023** ಸಿ. ಡಬ್ಲ್ಯೂ: **15** ಪಿ ಡಬ್ಲ್ಯೂ ಃ **6**</u>

ಸಾಕ್ಷಿಯ ಹೆಸರು ಃ ಮಾರುತಿ ಗುಳ್ಳಾರಿ

ತಂದೆಯ ಹೆಸರು ಃ ಶೇಖರಪ್ಪ

ವಯಸ್ಸು ಃ 55 ವರ್ಷ

ಉದ್ಯೋಗ ಃ ಪಿ ಐ, ಸಿ ಸಿ ಬಿ ಹುಬ್ಬಳ್ಳಿ.

ವಾಸಸ್ಥಳ ಃ ಹುಬ್ಬಳ್ಳಿ.

ದಿನಾಂಕಃ 12-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

<u>ಮುಖ್ಯ ವಿಚಾರಣೆಃ ಸಸಅ ರವರಿಂದ</u>

1. ನಾನು ಜುಲೈ 2022 ರಿಂದ ಆಗಸ್ಟ 2023 ರ ವರೆಗೆ ಕುಂದಗೋಳ ಪೋಲೀಸ್ ಠಾಣೆಯಲ್ಲಿ ಪಿ ಐ ಕೆಲಸ ಮಾಡಿದ್ದೇನೆ. ದಿಃ 29/01/2023 ರಂದು ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ 14 ಅವರಿಂದ ಪಡೆದು ಪರೀಶೀಲಿಸಿ ಮುಂದಿನ ತನಿಖೆ ಕೈಗೊಂಡು ಅದೇ ದಿನ ಅಪಘಾತ ಸ್ಥಳಕ್ಕೆ ಭೇಟಿ ಕೊಟ್ಟು ಚಾಸಾ 1 ಅವರು ತೋರಿಸಿದ ಸ್ಥಳದಲ್ಲಿ ಚಾಸಾ 4 ಮತ್ತು 5 ರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿ ಸ್ಥಳದಲ್ಲಿದ್ದ ಮೋಟಾರ್ ಸೈಕಲ ನಂಬರ ಕೆಎ-27-ಇಡಿ-6107 ಮತ್ತು ಕಾರ ನಂಬರ ಕೆ ಎಲ್ 56 ಡಬ್ಲ್ಯೂ 8177 ನ್ನು ಜಪ್ತಿ ಪಡಿಸಿಕೊಂಡು ಸ್ಥಳದ ಕಚ್ಚಾ ನಕಾಶೆ ತಯಾರಿಸಿ ಭಾವ ಚಿತ್ರ ತೆಗೆದಿರುತ್ತೇನೆ. ಅದೇ ದಿನ ಚಾಸಾ 6 ರಿಂದ 8 ನೇ ದವರ ಹೇಳಿಕೆಯನ್ನು ಪಡೆದಿರುತ್ತೇನೆ. ದಿಃ 01-02-2023 ರಂದು ಆರೋಪಿ ಠಾಣೆಗೆ ಹಾಜರಾಗಿದ್ದು ದಸ್ತಗಿರಿ ಕ್ರಮ ಅನುಸರಿಸಿ, ಡಿ ಎಲ್ ಮತ್ತು ಆಧಾರ ಕಾರ್ಡ ಪಡೆದು ಠಾಣಾ ಜಾಮೀನಿನ ಮೇಲೆ ಬಿಟ್ಟಿರುತ್ತೇನೆ. ದಿಃ 16-02-2023 ರಂದು ಮೃತನ ಪಿ ಎಮ್ ವರದಿಯನ್ನು ಚಾಸಾ 10 ಅವರಿಂದ ಪಡೆದು, ದಿಃ 16-02-2023 ರಂದು 2 ನೇ ಆರೋಪಿ ಹೇಳಿಕೆ ಪಡೆದು ದ್ವಿಚಕ್ರ ವಾಹನದ ಆರ್ ಸಿ ಮತ್ತು ಆಧಾರ ಕಾರ್ಡನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 19-02-2023 ರಂದು 2 ನೇ ಆರೋಪಿಗೆ ದಾಖಲೆ ಹಾಜರು ಪಡಿಸುವಂತೆ ಕಲಂ 133 ರಂತೆ ನೋಟೀಸ ನೀಡಿದ್ದು, ದಿಃ 20-02-2023 ರಂದು 2 ನೇ ಆರೋಪಿಯಿಂದ ಉತ್ತರ ಪಡೆದಿರುತ್ತೇನೆ. ದಿಃ 12-05-2023 ರಂದು ವಾಹನದ ಐ ಎಮ್ ವಿ ವರದಿಯನ್ನು ಅವರಿಂದ ಪಡೆದು, ದಿಃ 14-06-2023 ರಂದು 1 ನೇ ಆರೋಪಿ ಮತ್ತು ಚಾಸಾ 7 ಅವರ ಗಾಯದ

ಪ್ರಮಾಣ ಪತ್ರವನ್ನು ಕಿಮ್ಸ ಆಸ್ಪತ್ರೆಯಿಂದ ಪಡೆದಿರುತ್ತೇನೆ. ದಿಃ 15-06-2023 ರಂದು ಆದಿತ್ಯಾ ಮತ್ತು ಈರಣ್ಣ ಅವರ ಗಾಯದ ಪ್ರಮಾಣ ಪತ್ರವನ್ನು ಕಿಮ್ಸ ಆಸ್ಪತ್ರೆಯಿಂದ ಪಡೆದಿರುತ್ತೇನೆ. ದಿಃ 29-06-2023 ರಂದು ಆರೋಪಿ ಮತ್ತು ಚಾಸಾ 7 ಅವರ ಗಾಯದ ಪ್ರಮಾಣ ಪತ್ರವನ್ನು V-care ಆಸ್ಪತ್ರೆ ಹುಬ್ಬಳ್ಳಿಯಿಂದ ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದ್ವಿಚಕ್ರ ವಾಹನ ಮತ್ತು ಕಾರಗಳ ವಿಮಾ ಪತ್ರ ಹಾಜರು ಪಡಿಸದ ಕಾರಣ ನ್ಯಾಯಾಲಯಕ್ಕೆ ಪಿ ಎಫ್ ಸಲ್ಲಿಸಿರುತ್ತೇನೆ. ದಿಃ 01-08-2023 ರಂದು ತನಿಖೆ ಪೂರ್ಣಗೊಂಡಿದ್ದರಿಂದ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಆರೋಪಿ ನ್ಯಾಯಾಲಯದಲ್ಲಿ ಹಾಜರಿದ್ದು ಆರೋಪಿತನನ್ನು ನೋಡಿ ಗುರುತಿಸುತ್ತೇನೆ.

2. ಕೃತ್ಯ ಸ್ಥಳದ ಪಂಚನಾಮೆ ಈಗಾಗಲೇ ನಿಪಿ. 3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 3 ಡಿ ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ಈಗಾಗಲೇ ನಿಪಿ. 4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 4 ಡಿ ಎಂದು ಗುರುತಿಸಲಾಯಿತು. ಸ್ಥಳ ಪಂಚನಾಮೆ ಕಾಲಕ್ಕೆ ತೆಗೆದ ಭಾವ ಚಿತ್ರ ಈಗಾಗಲೇ ನಿಪಿ. 5 ಎಂದು ಗುರುತಿಸಲಾಗಿದ್ದು, ಗಾಯದ ಪ್ರಮಾಣ ಪತ್ರವನ್ನು ನಿಪಿ. 7 ರಿಂದ 14 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 7 ಎ ರಿಂದ 14 ಎ ಎಂದು ಗುರುತಿಸಲಾಯಿತು. ಪಿ ಎಮ್ ವರದಿಯನ್ನು ಈಗಾಗಲೇ ನಿಪಿ. 15 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 15 ಎ ಎಂದು ಗುರುತಿಸಲಾಯಿತು. ಐ ಎಮ್ ವಿ ವರದಿಯನ್ನು ಈಗಾಗಲೇ ನಿಪಿ. 16 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 16 ಎ ಎಂದು ಗುರುತಿಸಲಾಯಿತು. ಕಲಂ 133 ರ ನೋಟೀಸನ್ನು ನಿಪಿ. 17 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ. 17 ಎ ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆತ ಈ ದಿನ ನ್ಯಾಯಾಲಯಕ್ಕೆ ಗೈರು ಹಾಜರು ಇದ್ದಾನೆ. ಆತನ ಪರ ವಕೀಲರು ವಿನಾಯತಿ ಅರ್ಜಿ ಸಲ್ಲಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ ವಿ ಕೆ ವಕೀಲರಿಂದ ಃ

3. ಹುಬ್ಬಳ್ಳಿಯಿಂದ ಬೆಂಗಳೂರು ಕಡೆಗೆ NH-4 ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ಅಪಘಾತದ ಸ್ಥಳ ರಾಷ್ಟ್ರೀಯ ಹೆದ್ದಾರಿಯಲ್ಲಿದೆ ಎಂದರೆ ಸರಿ. ಅಪಘಾತದ ಸ್ಥಳದಲ್ಲಿ ಸರ್ವೀಸ್ ರಸ್ತೆ ಇದೆ ಎಂದರೆ ಸರಿ. ನಾನು ಅಪಘಾತದ ಸ್ಥಳಕ್ಕೆ ನಾನು ಹೋಗಿದ್ದೆ. ಅಪಘಾತದ ಸ್ಥಳದಲ್ಲಿ ಎರಡು ಬದಿ ಸರ್ವೀಸ್ ರಸ್ತೆ ಇತ್ತಾ ಎಂದರೆ ಇಲ್ಲ. ಎರಡು ಬದಿ ಸರ್ವೀಸ್ ರಸ್ತೆ ಇದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯ ಕಾಲಕ್ಕೆ ಪಂಚರಿಗೆ ನೋಟೀಸ

ಕೊಟ್ಟಿದ್ದೀರಾ ಎಂದರೆ ಕೊಟ್ಟಿದ್ದೇನೆ. ಸದರಿ ನೋಟೀಸನ ಆರೋಪ ಪಟ್ಟಿಯೊಂದಿಗೆ ಸಲ್ಲಿಸಿಲ್ಲ ಎಂದರೆ ಸಲ್ಲಿಸಿದ್ದೇನೆ. ಅಪಘಾತದ ಸ್ಥಳದಲ್ಲಿ 80 ಕೀ. ಮೀ. ವೇಗ ಮಿತಿ ಇದೆ ಎಂದರೆ ಸರಿ. ಅಪಘಾತದ ಸಮಯದಲ್ಲಿ 2 ನೇ ಆರೋಪಿ ಐದು ಜನರನ್ನು ಕರೆದುಕೊಂಡು ಮೋಟಾರ್ ಸೈಕಲನ್ನು ಚಲಾಯಿಸುತ್ತಿದ್ದ ಎಂದರೆ ಸರಿ. 2 ನೇ ಆರೋಪಿ ಐದು ಜನರನ್ನು ಹತ್ತಿಸಿಕೊಂಡು ಬೈಕ ಚಾಲನೆ ಮಾಡಿ ನಿಯಂತ್ರಣಕ್ಕೆ ಬಾರದೇ ಆತನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. 2 ನೇ ಆರೋಪಿಗೆ ಡಿ ಎಲ್ ಇರಲಿಲ್ಲ ಎಂದರೆ ಸರಿಯಲ್ಲ. ಸರಿಯಾಗಿ ಬೈಕ ಚಾಲನೆ ಮಾಡದ ಕಾರಣ ಅಪಘಾತವಾಗಿದೆ ಎಂದರೆ ಸರಿಯಲ್ಲ. 1 ನೇ ಆರೋಪಿ ಸಂಚಾರ ನಿಯಮ ಅನುಸರಿಸಿ ರಸ್ತೆಯ ಎಡಬದಿಯಲ್ಲಿ ಕಾರನ್ನು ಚಾಲನೆ ಮಾಡುತ್ತಿದ್ದ ಎಂದರೆ ಸರಿಯಲ್ಲ. 80 ಕೀ. ಮೀ. ಕ್ಕಿಂತ ವೇಗವಾಗಿ ಕಾರ ಚಾಲನೆ ಮಾಡುತ್ತಿದ್ದ ಎಂಬ ಬಗ್ಗೆ ದಾಖಲೆ ಹಾಜರು ಪಡಿಸಿದ್ದೀರಾ ಎಂದರೆ ಇಲ್ಲ. 1 ನೇ ಆರೋಪಿ ತಪ್ಪಿನಿಂದ ಅಪಘಾತವಾಗಿಲ್ಲ ಎಂದು ನನಗೆ ಮೇಲ್ನೋಟಕ್ಕೆ ತನಿಖೆ ಕಾಲದಲ್ಲಿ ಕಂಡು ಬಂದಿತ್ತು ಎಂದರೆ ಸರಿಯಲ್ಲ. ಚಾಸಾ 6 ಮತ್ತು 8 ರ ಹೇಳಿಕೆಯನ್ನು ಅವರ ಊರಿಗೆ ಹೋಗಿ ಪಡೆದಿದ್ದೇನೆ. ಾಸಚಾ 7 ರ ಹೇಳಿಕೆಯನ್ನು V-care ಆಸ್ಪತ್ರೆಯಿಂದ ಪಡೆದಿದ್ದೇನೆ. ಚಾಸಾ 6 ಮತ್ತು 8 ರ ಹೇಳಿಕೆಗಳನ್ನು ಲಿಖಿತವಾಗಿ ಪಡೆದಿಲ್ಲ, ಗಣಕೀಕೃತವಾಗಿ ಪಡೆದಿದ್ದೇನೆ ಎಂದರೆ ಸರಿಯಲ್ಲ. ಬೆರಳಚ್ಚು ಮಾಡಿದವರು ಪ್ರಿಂಟ್ ತೆಗೆದವರು ಯಾರೆಂದು ಅವರ ಹೆಸರನ್ನು ಆರೋಪ ಪಟ್ಟಿಯಲ್ಲಿ ನಮೂದಿಸಿಲ್ಲ ಎಂದರೆ ಸರಿ. ಈ ಪ್ರಕರಣಕ್ಕೆ ಅನುಕೂಲವಾಗಲಿ ಎಂದು ನಿಪಿ. 2 ರಂತೆ ನಾನು ಪಂಚನಾಮೆ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯಿಂದ ಅಪಘಾತಕ್ಕೆ ಯಾವುದೇ ನಿರ್ಲಕ್ಷ್ಯ ಚಾಲನೆ ಇರಲಿಲ್ಲ ಎಂದರೆ ಸರಿಯಲ್ಲ. ಈ ಕೇಸಿಗೆ ಅನುಕೂಲವಾಗಲಿ ಎಂದು ನಿಪಿ. 7 ರಿಂದ 14 ರ ದಾಖಲೆಗಳನ್ನು ಪಡೆದಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯ ಯಾವುದೇ ತಪ್ಪು ಇಲ್ಲದೇ ಇದ್ದರೂ ಒಬ್ಬ ವ್ಯಕ್ತಿ ಮೃತ ಪಟ್ಟ ಕಾರಣ ಸುಳ್ಳು ದೋಷರೋಪಣೆ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಕ್ತಿಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ.